2) ಧಾರವಾಡ ಜಿಲ್ಲೆಯಲ್ಲಿ ಶಿಕ್ಷಕರ ನೇಮಕಾತಿ

SRI A.M. HINDUSGERI (Hubli City): Madam deputy speaker. The Government had said thayt 11,008 postrs of Teachers in Government schools will be filled soon. However, in Dharwad district out of the total 438 posts only 56 have been filled. I wanted to know from the Government, when these posts would be filled and the reasons for not filling the posts, particularly in Urdu Schools where there are large number of vacancies.

ಶ್ರೀ ಎಂ ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷೀಣಿಯವರೆ, ಸರ್ಕಾರದ ಅಧೀಸೂಚನೆ ಸಂಖ್ಯೆ: ಇಡಿ 25 ಪಿ.ಎಂ.ಎಸ್.90 ದಿನಾಂಕ 20-12-90 ರಲ್ಲಿ ವಿಶೇಷ ನೇಮಕಾತಿ ನಿಯಮಾವಳಿಗಳನ್ನು ರಚಿಸಿದೆ. ಆ ಪ್ರಕಾರ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ದಿನಾಂಕ ೧.೩.೯೦ ರಂದು ಇದ್ದಂತೆ, ಇದ್ದ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಧಾರವಾಡ ಜಿಲ್ಲೆಯಲ್ಲಿ ದಿನಾಂಕ ೧.೩.೯೦ರಂದು ಕೇವಲ ೯೦ ಹುದ್ದೆಗಳು ಖಾಲಿ ಇದ್ದುದರಿಂದ ಅಷ್ಟು ಹುದ್ದೆಗಳಿಗೆ ಮಾತ್ರ ವಿಶೇಷ ನೇಮಕಾತಿ ನಿಯಮಗಳ ಪ್ರಕಾರ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಿ 56 ಹುದ್ದೆಗಳಿಗೆ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ಉಳಿದ 34 ಹುದ್ದೆಗಳಿಗೆ ಆರ್ಥಿಕ ಮಿತವ್ಯಯದ ಆದೇಶ ಸಡಿಲಗೊಂಡ ನಂತರ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗುವುದು. ಈ ಹುದ್ದೆಗಳ ಸಂಖ್ಯೆ ಬೇರೆ ಜಿಲ್ಲೆಗಳಿಗಿಂತ ಕಡಿಮೆ ಇರಲು ಕಾರಣವೇನೆಂದರೆ ಧಾರವಾಡ ಜಿಲ್ಲಾಪರಿಷತ್ ಮುಖ್ಯ ಕಾರ್ಯದರ್ಶಿಗಳು 1989-90ನೇ ಸಾಲಿನಲ್ಲಿಯೇ 546 ಕನ್ನಡ 20 ಉರ್ದು ಮತ್ತು 14 ದೈಹಿಕ ಹುದ್ದೆ ಒಟ್ಟು 580 ಶಿಕ್ಷಕರ ಹುದ್ದೆಗೆ ಆಯ್ಕೆ ಮಾಡಿದ್ದಾರೆ. ಆಗ ಕೇವಲ 388 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳಿಗೆ ಮಾತ್ರ ಆರ್ಥಿಕ ಮಿತವ್ಯಯ ಸಡಿಲಗೊಂಡಿದ್ದರಿಂದ ಅಷ್ಟು ಹುದ್ದೆಗಳಿಗೆ ಮಾತ್ರ ನೇಮಕ ಮಾಡಿಕೊಳ್ಳಲು ಆದೇಶಿಸಲಾಯಿತು. ನಂತರ ಸರ್ಕಾರ ದಿನಾಂಕ 3-10-90 ರ ಪತ್ರದಲ್ಲಿ ಉಳಿದ ಹುದ್ದೆಗಳಿಗೂ ನೇಮಕ ಮಾಡಲು ಆದೇಶ ನೀಡಿತು. ಆದ್ದರಿಂದ ವಿಶೇಷ ನೇಮಕಾತಿ ನಿಯಮಗಳ ಅಡಿಯಲ್ಲಿ ನೇಮಕ ಮಾಡಲು ಬಹಳ ಕಡಿಮೆ ಹುದ್ದೆಗಳು ಉಳಿದಿವೆ.

3) ನಿಪ್ಪಾಣಿ ಪುರಸಭೆಗೆ ಸಾಹಾಯಧನ ಬಿಡುಗಡೆ

SUBHASH S. JOSHI (NIPANI): Madem Deputy Speaker, Though the drinking water scheme is sanctioned for Nipani city it will take two yearts to complete. But at present, the city is facing an acute drinking water problem. Now the Jawahar water tank which provides water to the city is dry and therefore the water has to be transported from the long distance which will cost Rs 2,000,000 and the COM-C- Nipani will face an econmical crisis. Therefore I request the Hon'ble Housing and Urban Development Minister to sanction scarcity fund to COM-C- NIPANI.

ಶ್ರೀ ಎಂ ವೀರಪ್ಪ ಮೊಯಿಲಿ (ಶಿಕ್ಷಣ ಹಗೂ ಸಂಸದೀಯ ವ್ಯವಹಾರಗಳು ಸಚಿವರು): ಸನ್ಮಾನ್ಯ ಉಪಾಧ್ಯಕ್ಷೀಣಿಯವರೆ ಮಾನ್ಯ ಶಾಸಕರು ಎತ್ತಿದಂಥ ಈ ಕುಡಿಯುವ ನೀರಿನ ಸಮಸ್ಯೆ ಏನಿದೆ ಅದನ್ನು ನಾನು ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳ ಗಮನಕ್ಕೆ ತಂದು ಈ ಬಗ್ಗೆ ಸೂಕ್ತ ವಿಚಾರಗಳನ್ನು ಮಾಡುವುದಕ್ಕೆ ಹೇಳುತ್ತೇನೆ.